# ಸರ್ವರೋಗಕ್ಕೂ ಸಲ್ಲುವ ಅಳಲೆ



ಜ್ವರ, ಕೆಮ್ಮುಗಳಂತಹ ಸಾಮಾನ್ಯ ಕಾಯಿಲೆಗಳಿಂದ ಹಿಡಿದು ಕಾಮಾಲೆ, ಅಸ್ತಮಾ, ಪೈಲ್ಸ್ ಮತ್ತು ಹೃದ್ರೋಗದಂತಹ ಗಂಭೀರ ಸಮಸ್ಯೆಗಳಿಗೂ ಅಳಲೆಕಾಯಿ ಸೇವನೆ ಪರಿಣಾಮಕಾರಿ.

**ವೆಂಕಟೇಶ ಟಿ.ಜಿ.**

'ಸರ್ವರೋಗಕ್ಕೂ ಸಾರಾಯಿ ಮದ್ದು' ಎಂಬುದು ಸಾರಾಯಿ ಪ್ರಿಯರ ಸಿದ್ಧಾಂತವೇ ಹೊರತು ವೈಜ್ಞಾನಿಕ ಸತ್ಯವಲ್ಲ. ಹಾಗಾದರೆ ಸರ್ವರೋಗಕ್ಕೂ ಮದ್ದೊಂದಿದೆಯೇ? ನೀವು ಇಂತಹದೊಂದು ಪ್ರಶ್ನೆಯನ್ನಿಟ್ಟುಕೊಂಡು ಸಿಟಿಯ ಸುಪ್ರಸಿದ್ಧ ವೈದ್ಯರ ಬಳಿ ಹೋದರೂ ಬಹುಶಃ ನಿಮಗೆ ಉತ್ತರ ಸಿಗಲಾರದು. ಆದರೆ ನಮ್ಮ ಪ್ರಾಚೀನ ವೈದ್ಯಪದ್ಧತಿಯಲ್ಲಿ ಈ ಪ್ರಶ್ನೆಗೆ ಉತ್ತರವಿದೆ.

ಹೌದು, ಆಯುರ್ವೇದದಲ್ಲಿ 'ಔಷಧಗಳ ರಾಜ' ಎಂದೇ ಪ್ರಸಿದ್ಧವಾಗಿರುವ ಸಸ್ಯವೊಂದಿದೆ. ವೈಜ್ಞಾನಿಕವಾಗಿ Terminalia Chebula ಎಂದು ಕರೆಯಲ್ಪಡುವ ಈ ಸಸ್ಯ ಕಾಂಬ್ರೆಟೇಸಿ (Combretaceae) ಎಂಬ ಸಸ್ಯ ಕುಟುಂಬಕ್ಕೆ ಸೇರುತ್ತದೆ. ಕನ್ನಡದಲ್ಲಿ ಅಳಲೇಕಾಯಿ ಎಂದು ಹೆಸರಾಗಿರುವ ಈ ಪ್ರಭೇದ ಕರ್ನಾಟಕ ಸೇರಿದಂತೆ ಭಾರತದಾದ್ಯಂತ ಕಂಡುಬರುತ್ತದೆ. ರೆಂಬೆ-ಕೊಂಬೆಗಳೊಂದಿಗೆ ವಿಶಾಲವಾಗಿ ಕಾಣುವ ಅಳಲೇಕಾಯಿ ಮರ ಇಪ್ಪತ್ತೈದರಿಂದ ಮೂವತ್ತು ಮೀಟರ್ ಎತ್ತರ ಬೆಳೆಯಬಲ್ಲದು. ಈ ಮರದಲ್ಲಿ ಕಾಣಿಸುವ ಹಳದಿ ಮಿಶ್ರಿತ ಬಿಳಿಯ ಹೂಗಳು ಕ್ರಮೇಣ ಹಸಿರು ಕಾಯಿಗಳಾಗುತ್ತವೆ. ಕಾಯಿಗಳು ಮಾಗಿದಂತೆ ಕಂದು ಬಣ್ಣಕ್ಕೆ ತಿರುಗಿ ಮೇಲ್ಮೈ ಗಟ್ಟಿಯಾಗುತ್ತದೆ. ಈ ಕಾಯಿಗಳನ್ನು ಒಣಗಿಸಿ, ಪುಡಿ ಮಾಡಿ ಔಷಧಕ್ಕಾಗಿ ಬಳಸಲಾಗುತ್ತದೆ.

ಅಳಲೇಕಾಯಿಯ ಔಷಧೀಯ ಗುಣಗಳನ್ನು ಹೇಳುತ್ತಾ ಹೊರಟರೆ ದೊಡ್ಡದೊಂದು ಪಟ್ಟಿ ಸಿದ್ಧವಾಗುತ್ತದೆ. ಆಯುರ್ವೇದದಲ್ಲಿ ಉಲ್ಲೇಖವಾಗುವ ವಾತ, ಪಿತ್ತ ಮತ್ತು ಕಫ ಎಂಬ ಮೂರು ವಿಭಿನ್ನ ಆರೋಗ್ಯ ಸಮಸ್ಯೆಗಳಿಗೂ ಅಳಲೇಕಾಯಿಯನ್ನು ಮದ್ದಾಗಿ ಬಳಸಲಾಗುತ್ತಿತ್ತು. ಜ್ವರ, ಕೆಮ್ಮುಗಳಂತಹ ಸಾಮಾನ್ಯ ಕಾಯಿಲೆಗಳಿಂದ ಹಿಡಿದು ಕಾಮಾಲೆ, ಅಸ್ತಮಾ, ಪೈಲ್ಸ್ ಮತ್ತು ಹೃದ್ರೋಗದಂತಹ ಗಂಭೀರ ಸಮಸ್ಯೆಗಳಿಗೂ ಅಳಲೆಕಾಯಿ ಸೇವನೆ ಪರಿಣಾಮಕಾರಿ ಚಿಕಿತ್ಸೆ. ಗಾಯಗಳನ್ನು ವಾಸಿ ಮಾಡಲು ಅಳಲೆಕಾಯಿ ರಸವನ್ನು ಲೇಪನ ಮಾಡಲಾಗುತ್ತಿತ್ತು. ಬ್ಯಾಕ್ಟೀರಿಯಾ ಮತ್ತು ಫಂಗಸ್‌ಗಳಂತಹ ರೋಗಾಣುಗಳನ್ನು ನಿಯಂತ್ರಿಸುವ ಅಳಲೆ ಬಹುತೇಕ ಚರ್ಮರೋಗಗಳಿಗೆ ರಾಮಬಾಣವಂತೆ. ಅಳಲೆಕಾಯಿ ಪುಡಿಯನ್ನು ನೀರಿನೊಂದಿಗೆ ಮುಕ್ಕಳಿಸುವುದರಿಂದ ಬಾಯಿ ಹುಣ್ಣು ಮತ್ತಿತರ ವಸಡು ದೋಷಗಳಿಂದ ಮುಕ್ತಿ ಪಡೆಯಬಹುದು. ಮಾನವನ ಜೀರ್ಣಶಕ್ತಿಯನ್ನು ವೃದ್ಧಿಸುವ ಅಳಲೆ ಮಲಬದ್ಧತೆ ನಿವಾರಣೆಯಲ್ಲೂ ಸಹಕಾರಿ. ಎಲ್ಲಾ ಬಗೆಯ ಕಣ್ಣಿನ ದೋಷಗಳ ನಿವಾರಣೆಯಲ್ಲೂ ಅಳಲೆಕಾಯಿ ಸಹಾಯ ಮಾಡುವುದೆಂದು ನಂಬಲಾಗಿದೆ. ಹಿರಿಯರು ಹೇಳುವ ಪ್ರಕಾರ, ಪ್ರತಿದಿನ ಮುಂಜಾನೆ ಅಳಲೆಕಾಯಿಯ ಕಷಾಯವನ್ನು ಕುಡಿಯುವುದರಿಂದ ದೇಹದ ಉಷ್ಣತೆಯನ್ನು ತಗ್ಗಿಸುವುದರ ಜೊತೆಜೊತೆಗೆ ದೇಹದಲ್ಲಿ ಶೇಖರಗೊಂಡ ಅನಗತ್ಯ ಕೊಬ್ಬನ್ನೂ ಕರಗಿಸಬಹುದು. ಅಷ್ಟೇ ಅಲ್ಲದೆ ನರದೌರ್ಬಲ್ಯ ಮತ್ತು ಲೈಂಗಿಕ ತೊಂದರೆಯಿರುವವರಿಗೂ ಅಳಲೆ ಸಹಕಾರಿ ಎಂದು ನಂಬಲಾಗಿದೆ. ಅಳಲೆಕಾಯಿ ಸೇವನೆಯಿಂದ ಗರ್ಭಪಾತದ ಸಂಭವ ಹೆಚ್ಚಿರುವುದರಿಂದ ಗರ್ಭಿಣಿಯರು ಮಾತ್ರ ಇದನ್ನು ಸೇವಿಸುವಂತಿಲ್ಲ.

ಅಳಲೆಕಾಯಿಯಲ್ಲಿ ಚೆಬುಲ್ಯಾಜಿಕ್ ಆ್ಯಸಿಡ್, ಚೆಬುಲಿನಿಕ್ ಆ್ಯಸಿಡ್ ಮತ್ತು ಕಾರಿಲೇಜಿನ್ ನಂತಹ ರಾಸಾಯನಿಕಗಳನ್ನು ಗುರುತಿಸಲಾಗಿದೆಯಾದರೂ, ಅದರ ವೈವಿಧ್ಯಮಯ ಮತ್ತು ವಿಸ್ತಾರವಾದ ಔಷಧೀಯ ಗುಣಗಳನ್ನು ಕುರಿತಾದ ಕೂಲಂಕಷ ಅಧ್ಯಯನದ ಅಗತ್ಯವಿದೆ. ವಿಫುಲ ಔಷಧೀಯ ಗುಣಗಳಿರುವುದರಿಂದ, ಬಹುತೇಕ ಎಲ್ಲಾ ಕಾಯಿಲೆಗಳಿಗೂ ನಮ್ಮ ಆಯುರ್ವೇದ ಪಂಡಿತರು ಅಳಲೆಕಾಯಿ ಚೂರ್ಣವನ್ನು ಕೊಟ್ಟು ಸುಮ್ಮನಾಗಿ ಬಿಡುತ್ತಿದ್ದರು. ಆದ್ದರಿಂದಲೇ ಅವರು 'ಅಳಲೇಕಾಯಿ ಪಂಡಿತ'ರೆಂದು ಇಂದಿಗೂ ಪ್ರಸಿದ್ಧಿ.

ಭಾರತದಲ್ಲಿ ಹಿಮಾಲಯ, ಜಂಡು ಸೇರಿದಂತೆ ಹಲವಾರು ಕಂಪನಿಗಳು ಅಳಲೇಕಾಯಿಯಿಂದ ವೈವಿಧ್ಯಮಯ ಉತ್ಪನ್ನಗಳನ್ನು ತಯಾರಿಸುತ್ತಿವೆ. ಹರಿಟಾಕಿ, ಅಭಯಮೋದಕ್, ಪಥ್ಯಾದಿಚೂರ್ಣ, ತ್ರಿಫಲಚೂರ್ಣ ಮುಂತಾದ ಅಳಲೆಕಾಯಿಯ ಉತ್ಪನ್ನಗಳು ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯ. ತ್ರಿಫಲ ತಯಾರಿಕೆಯಲ್ಲಿ ಅಳಲೇಕಾಯಿಯ ಜೊತೆ ತಾರೆಕಾಯಿ, ಮತ್ತು ನೆಲ್ಲಿಕಾಯಿ ಗಳನ್ನು ಬಳಸಲಾಗುತ್ತದೆ.



